## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಬಿ.ಮೊಹಮ್ಮದ್ ಷರೀಫ್, ಕಾರ್ಯದರ್ಶಿ, ಚಟ್ನಹಳ್ಳಿ ಗ್ರಾಮ ಪಂಚಾಯತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧದ ನಡವಳಿ ಕುರಿತು.

**ಓದಲಾಗಿದೆ:**
1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-1811/2016/ಡಿಆರ್‌ಇ-1, ದಿನಾಂಕ: 03-03-2018.
2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-1811/2016/ಡಿಆರ್‌ಇ-1, ದಿನಾಂಕ:22-02-2018.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ:03-03-2018 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರನ್ವಯ ಮಾನ್ಯ ಉಪಲೋಕಾಯುಕ್ತರವರು ಸಲ್ಲಿಸಿರುವ ವರದಿಯಲ್ಲಿ ಶ್ರೀ ಮಗಲಾಯಿ ಭೋವಿ ತಿಮ್ಮಪ್ಪ ಬಿನ್ ಸಣ್ಣ ದುರಗಪ್ಪ, ಭಾರತಿ ಕಾಲೋನಿ, 15ನೇ ಕ್ರಾಸ್, 15ನೇ ವಾರ್ಡ, ದಾವಣಗೆರೆ ಟೌನ್, ದಾವಣಗೆರೆ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು 1)ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಟ್ನಹಳ್ಳಿ ಗ್ರಾಮ ಪಂಚಾಯಿತಿ 2)ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹರಪನಹಳ್ಳಿ 3)ಶ್ರೀ. ಬಿ.ಮೊಹಮ್ಮದ್ ಷರೀಫ್, ಕಾರ್ಯದರ್ಶಿ, ಚಟ್ನಹಳ್ಳಿ ಗ್ರಾಮ ಪಂಚಾಯತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಚಟ್ನಹಳ್ಳಿ ಗ್ರಾಮ ಪಂಚಾಯಿತಿಯ ಕುರೆಮಾಗನಹಳ್ಳಿ ಗ್ರಾಮಕ್ಕೆ ಸೇರಿದ ಡೋರ್ ನಂ.40ರ ಖಾಲಿ ನಿವೇಶನದ ಖಾತೆಯು ದೂರುದಾರರ ತಂದೆಯವರಾದ ಲೇ.ಸಣ್ಣದುರುಗಪ್ಪ ಅವರ ಹೆಸರಿನಲ್ಲಿತ್ತು. ಮೂಲ ಖಾತೆದಾರರಿಗೆ ಗೊತ್ತಿಲ್ಲದಂತೆ ಅಧಿಕಾರ ದುರುಪಯೋಗ, ಭ್ರಷ್ಟಾಚಾರ ಮತ್ತು ಲಂಚಗುಳಿತನದಿಂದ ಬೇರೆಯವರ ಹೆಸರಿಗೆ ಎದುರುದಾರರು ಖಾತಾ ಬದಲಾವಣೆ ಮಾಡಿರುತ್ತಾರೆ. ಈ ಸಂಬಂಧ ಪಿಡಿಓ ರವರಿಗೆ ಕೇಳಲಾಗಿ ಉಡಾಫೆಯಿಂದ ವರ್ತಿಸುತ್ತಿದ್ದು, ಯಾವುದೇ ಕ್ರಮಕೈಗೊಳ್ಳದೇ ತಟಸ್ಥರಾಗಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿರುತ್ತಾರೆ.

ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಹರಪನಹಳ್ಳಿ ತಾಲ್ಲೂಕು ಚಟ್ನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕುರೆಮಾಗನಹಳ್ಳಿ ಗ್ರಾಮದ ಶ್ರೀ ಮೋಗಲಾಯ್ ಸಣ್ಣ ದುರುಗಪ್ಪ ಎಂದು 2013-14ನೇ ಸಾಲಿನ ಕರ ಆಕರಣೆ ರಿಜಿಸ್ಟರ್‌ನಲ್ಲಿ ಖಾತೆ ಇದ್ದು, ಸುಮಾರು ವರ್ಷಗಳಿಂದ ತನ್ನ ಸ್ವಾಧೀನಾನುಭವದಲ್ಲಿ ಮನೆ ಆಸ್ತಿ ಸಂ.40 ಖಾನೇಷುಮಾರಿ 40 ಇದ್ದು, ಇದರ ಅಳತೆ ಪೂ.ಪ.8.8 ಮೀ, ಉದ್ದ, 4.80 ಮೀ. ಖಾಲಿ ಜಾಗಕ್ಕೆ ಚೆಕ್ಕುಬಂದಿ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಸಂದು, ಉತ್ತರಕ್ಕೆ ಸಿದ್ದಪ್ಪನ ಮನೆ, ದಕ್ಷಿಣಕ್ಕೆ ದ್ಯಾಮಪ್ಪನ ಮನೆ ಈ ಮಧ್ಯೆ ಇರುವಂತಹ ಸದರಿ ವಾರಸುದಾರರ ಅನುಮತಿಯಿಲ್ಲದೆ ಅಥವಾ ಕ್ರಯಪತ್ರವಿಲ್ಲದೆ ಸದರಿ ಗ್ರಾಮದ ಶ್ರೀಮತಿ ಗೀತಮ್ಮ ಕೋಂ ರುದ್ರೇಶ ಎಂಬುವರ ಹೆಸರಿಗೆ ದಿ:23-01-2015 ರಂದು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಚಟ್ನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಕುರೆಮಾಗನಹಳ್ಳಿ ಗ್ರಾಮದವರಿಗೆ ರೂ.100/-ಗಳ ಛಾಪಾ ಕಾಗದದ ಮೂಲಕ

2..

ಕರಾರುಪತ್ರ ಮಾಡಿಕೊಂಡಿರುತ್ತಾರೆ. ಚಟ್ನಹಳ್ಳಿ ಗ್ರಾಮ ಪಂಚಾಯಿತಿಯ ಕಾರ್ಯಾಲಯದಲ್ಲಿ ಕಾರ್ಯದರ್ಶಿಗಳು ಹಾಗೂ ಪಂಚಾಯತ್ ಅಭಿವೃದ್ದಿ ಅಧಿಕಾರಿಗಳು ಸಾಮಾನ್ಯ ಸಭೆಯಲ್ಲಿ ಚರ್ಚಿಸದೆ ತಿದ್ದುಪಡಿ ಮಾಡಿದ ಬಗ್ಗೆ ಯಾವ ಅಧಿಕಾರಿಗಳು ಎಲ್ಲಿಯೂ ನಮೂದಿಸಿಲ್ಲ. ಆ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ವಿಚಾರಿಸಿದಾಗ, ಖಾತೆ ತಿದ್ದುಪಡಿ ಮಾಡಿದ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಶ್ರೀಮತಿ ಗೀತಮ್ಮ ಕೋಂ ರುದ್ರೇಶ್ ಎಂಬುವರ ಹೆಸರಿಗೆ ಡಿಮ್ಯಾಂಡ್‌ನಲ್ಲಿ ತಿದ್ದುಪಡಿಯಾಗಿದೆ. ಆದರೆ ಮೂಲ ಖಾತೆದರರ ಹೆಸರು ಪಂಚತಂತ್ರ ತಂತ್ರಾಂಶದಲ್ಲಿ ಆಸ್ತಿ ಸಂ.40 ಮಗಲಾಯ್ ಸಣ್ಣ ದುರುಗಪ್ಪ ಎಂದು ಇರುತ್ತದೆ. ಸದರಿ ಖಾತೆಯನ್ನು ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ತಿದ್ದುಪಡಿ ಮಾಡಿದ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿರುವುದಿಲ್ಲ. ಗ್ರಾಮ ಪಂಚಾಯಿತಿಯ ಕಾರ್ಯಲಯದಲ್ಲಿ ಖಾತೆಯನ್ನು ಬದಲಾವಣೆ ಮಾಡಿರುವುದಕ್ಕೆ ಅಧಿಕೃತವಾಗಿ ಯಾವ ಅಧಿಕಾರಿಯೂ ಸಹಿ ಮಾಡಿರುವುದಿಲ್ಲ ಹಾಗೂ ಆ ವಿಚಾರವನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿರುವುದಿಲ್ಲವೆಂದು ಹೇಳಿರುತ್ತಾರೆ.

2ನೇ ಎದುರುದಾರರು ದೂರು ಅರ್ಜಿಯಲ್ಲಿನ ವಿಷಯದ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಪಂಚಾಯತ್ ಅಭಿವೃದ್ದಿ ಅಧಿಕಾರಿ, ಗ್ರಾಮ ಪಂಚಾಯಿತಿ ಚಟ್ನಹಳ್ಳಿ ಇವರಿಗೆ ನೀಡಿರುವ ಸೂಚನಾ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ ದೂರುದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳ ಸಮೇತ ಗೌರವಾನ್ವಿತರ ಮುಂದೆ ಹಾಜರಾಗುವಂತೆ ದೂರುದಾರರಿಗೆ ಹಾಗೂ ಪಂಚಾಯತ್ ಅಭಿವೃದ್ದಿ ಅಧಿಕಾರಿ, ಗ್ರಾಮ ಪಂಚಾಯಿತಿ ಚಟ್ನಹಳ್ಳಿ ಇವರಿಗೆ ಆದೇಶಿಸಲಾಗಿತ್ತು.

ಪಂಚಾಯತ್ ಅಭಿವೃದ್ದಿ ಅಧಿಕಾರಿ, ಚಟ್ನಹಳ್ಳಿ ಗ್ರಾಮ ಪಂಚಾಯಿತಿ, ಹರಪನಹಳ್ಳಿ ಇವರು ಹಾಜರಾಗಿ ಮೂಲ ಹೌಸ್‌ಲಿಸ್ಟ್ ಪುಸ್ತಕವನ್ನು ಹಾಜರುಪಡಿಸಿದ್ದು, ಸದರಿ ರಿಜಿಸ್ಟರ್‌ನ್ನು ಪರಿಶೀಲಿಸಿದಾಗ ಆಸ್ತಿ ನಂ.40 ಮಗಲಾಯಿ ಸಣ್ಣ ದುರುಗಪ್ಪ ಎನ್ನುವವರ ಹೆಸರಿನಲ್ಲಿದ್ದು, ಸದರಿ ಹೆಸರನ್ನು ಕೆಂಪು ಷಾಹಿಯಲ್ಲಿ ರೌಂಡ್ ಮಾರ್ಕ್ ಮಾಡಿ ಅದರ ಪಕ್ಕದಲ್ಲಿ ಗೀತಮ್ಮ ಕೋಂ ರುದ್ರೇಶ ಎಂದು ನಮೂದು ಮಾಡಿರುವುದು ಕಂಡುಬರುತ್ತಿದ್ದು, ಆದರೆ ಸದರಿ ತಿದ್ದುಪಡಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರಿಗಳ ಸಹಿ ಕಂಡುಬರುತ್ತಿಲ್ಲ. ಸದರಿ ಅಂಶವನ್ನು ಗಮನಿಸಿದಾಗ, ಯಾವುದೇ ದಾಖಲಾತಿಗಳು ಇಲ್ಲದೆ ಪಂಚಾಯತ್ ಅಭೆಯಲ್ಲಿ ಠರಾವು ಆಗದೆ ಮಗಲಾಯಿ ಸಣ್ಣ ದುರುಗಪ್ಪರವರ ಹೆಸರಿನಲ್ಲಿರುವ ಖಾತೆಯನ್ನು ಬದಲಾವಣೆ ಮಾಡಲು ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಪಂಚಾಯತ್ ಅಭಿವೃದ್ದಿ ಅಧಿಕಾರಿಯವರನ್ನು ವಿಚಾರಿಸಲಾಗಿ ಹೌಸ್‌ಲಿಸ್ಟ್ ಪುಸ್ತಕವು ಪಂಚಾಯತಿ ಕಾರ್ಯದರ್ಶಿಯ ಸುಪರ್ದಿಯಲ್ಲಿರುತ್ತದೆ. ಈ ಪ್ರಕರಣದಲ್ಲಿ ಕಾರ್ಯದರ್ಶಿ ಬಿ.ಮೊಹಮ್ಮದ್ ಷರೀಫ್ ಎನ್ನುವವರು ಖಾತಾ ಬದಲಾವಣೆ ಬಗ್ಗೆ ದಿ:03-08-2015 ರಂದು ಹಿಂಬರಹ ನೀಡಿರುವುದು ಕಂಡುಬರುತ್ತದೆಯೆಂದು ಹೇಳಿಕೆ ನೀಡಿರುತ್ತಾರೆ.

ಪಂಚಾಯತ್ ಅಭಿವೃದ್ದಿ ಅಧಿಕಾರಿ ಹಾಜರುಪಡಿಸಿರುವ ಹೌಸ್‌ಲಿಸ್ಟ್ ವಹಿಯ ಪ್ರತಿಯನ್ನು ಪರಿಶೀಲಿಸಿದಾಗ, ಆಸ್ತಿ ಸಂ.40ಕ್ಕೆ ಸಂಬಂಧಪಟ್ಟಂತೆ ಮಗಲಾಯಿ ಸಣ್ಣ ದುರುಗಪ್ಪ ಎನ್ನುವವರ ಹೆಸರನ್ನು ರೌಂಡ್ ಮಾಡಿ ಪಕ್ಕದಲ್ಲಿ ಗೀತಮ್ಮ ಕೋಂ ರುದ್ರೇಶ್ ಎಂದು ಸೇರ್ಪಡೆ ಮಾಡಿರುವುದು ಕಂಡುಬರುತ್ತದೆ. ಸದರಿ ತಿದ್ದುಪಡಿಯ ಬಗ್ಗೆ ಅಧಿಕಾರಿಯ ಸಹಿಯಾಗಲಿ ಅಥವಾ ಯಾವ ಆದೇಶದ ಪ್ರಕಾರ ಸೇರ್ಪಡೆಗೊಳಿಸಲಾಗಿದೆಯೆನ್ನುವ ಬಗ್ಗೆ ನಮೂದು ಕಂಡುಬರುತ್ತಿಲ್ಲ. ಸದರಿ ಅಂಶವನ್ನು ಗಮನಿಸಿದಾಗ, ಮಗಲಾಯಿ ಸಣ್ಣ ದುರುಗಪ್ಪರವರ ಹೆಸರನ್ನು ತೆಗೆದು ಗೀತಮ್ಮ ಎನ್ನುವವರ ಹೆಸರನ್ನು ಅಕ್ರಮವಾಗಿ ಸೇರ್ಪಡೆಗೊಳಿಸಿರುವುದು ಕಂಡುಬರುತ್ತದೆ. ದೂರುದಾರರು ತನ್ನ ದೂರಿನ ಜೊತೆ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಚಟ್ನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾದ ಬಿ.ಮೊಹಮ್ಮದ್ ಷರೀಫ್ ಎನ್ನುವವರು ದಿನಾಂಕ:03-08-2015 ರಂದು ಒಂದು ಹಿಂಬರಹವನ್ನು ನೀಡಿರುವುದು ಕಂಡುಬರುತ್ತಿದ್ದು, ಸದರಿ ಹಿಂಬರಹದಲ್ಲಿ "ಹರಪನಹಳ್ಳಿ ತಾಲ್ಲೂಕು ಅರಸಿಕೇರೆ ಹೋಬಳಿ ಚಟ್ನಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುವಂತಹ ಕುರೇಮಾಗನಹಳ್ಳಿ ಗ್ರಾಮದ ಡೋರ್ ನಂ.40ರ ಖಾತೆ ಸಂ.ಮಗಲಾಯಿ ಸಣ್ಣ ದುರುಗಪ್ಪ ಇವರ ಹೆಸರಿಗೆ ಖಾತೆ ಇದ್ದು, ಆ ಖಾತೆಯನ್ನು ಬದಲಾವಣೆ ಮಾಡಲು ಗ್ರಾಮಸ್ಥರು ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಸಹಿ ಮಾಡಿಕೊಟ್ಟಿರುತ್ತಾರೆ ಮತ್ತು ಖಾಲಿ ನಿವೇಶನದ ಕ್ರಯದ

ಕರಾರು, ಗ್ರಾಮಸ್ಥರ ಮಹಜರ್ ಮುಖಾಂತರ ಖಾತೆ ಬದಲಾವಣೆ ಮಾಡಲಾಗಿದೆ" ಎಂದು ಹಿಂಬರಹ ನೀಡಿರುವುದು ಕಂಡುಬರುತ್ತದೆ. ಅದನ್ನು ಪರಿಶೀಲಿಸಿದಾಗ, ಯಾವುದೇ ನಿಯಮಗಳನ್ನು ಪಾಲಿಸದೆ ಅಕ್ರಮವಾಗಿ ಖಾತಾ ಬದಲಾವಣೆಗೆ ಕಾರ್ಯದರ್ಶಿಯಾದ ಬಿ.ಮೊಹಮ್ಮದ್ ಷರೀಫ್ ಪ್ರಯತ್ನಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, 3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯು ಸಮಂಜಸವಾಗಿರುವುದಿಲ್ಲವೆಂದು ಅಭಿಪ್ರಾಯಕ್ಕೆ ಬಂದಿದ್ದು, 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

3ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರಿಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಸದರಿಯವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ಅಡಿಯಲ್ಲಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/147/ಗ್ರಾಪಂಕಾ/2018, ಬೆಂಗಳೂರು, ದಿನಾಂಕ:23-03-2018.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿ.ಮೊಹಮ್ಮದ್ ಷರೀಫ್, ಕಾರ್ಯದರ್ಶಿ, ಚಟ್ನಹಳ್ಳಿ ಗ್ರಾಮ ಪಂಚಾಯತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

26/3

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ:</u>**

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 46 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ, ದಾವಣಗೆರೆ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹರಪನಹಳ್ಳಿ, ದಾವಣಗೆರೆ ಜಿಲ್ಲೆ.
6. ಶ್ರೀ ಬಿ.ಮೊಹಮ್ಮದ್ ಷರೀಫ್, ಕಾರ್ಯದರ್ಶಿ, ಚಟ್ನಹಳ್ಳಿ ಗ್ರಾಮ ಪಂಚಾಯತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
7. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.